ಎಲ್ಲಾ ಕೈ ಜೋಡಿಸಿದರೆ ಮರದ ಕೆಳಗಿರುವ ಆ ವ್ಯಕ್ತಿಯನ್ನು ಮೇಲಕ್ಕೆತ್ತಬಹುದು...'

'ಹೌದು... ಮಾಲಿಯ ಅಭಿಪ್ರಾಯ ಸರಿ ಇದೆ. ನಾವು ಕೈ ಜೋಡಿಸಲು ತಯಾರಿದ್ದೇವೆ.' ನಾಲ್ಕಾರು ಜನ ಕ್ಲಾರ್ಕ್‌ಗಳು ಒಕ್ಕೊರಲಿನಿಂದ ಹೇಳಿದರು.

'ಸ್ವಲ್ಪ ತಡೆಯಿರಿ. ನಾನು ಈ ಕೂಡಲೇ ಹೋಗಿ ಅಂಡರ್ ಸೆಕ್ರೆಟರಿಯವರ ಸಲಹೆ ಪಡೆದು ಬರುತ್ತೇನೆ.' ಸೂಪರಿಟೆಂಡೆಂಟ್ ಕೂಗಿ ಹೇಳಿದ.

ಸೂಪರಿಟೆಂಡೆಂಟ್ ಅಂಡರ್ ಸೆಕ್ರೆಟರಿ ಬಳಿಗೆ ಹೋದ. ಅಂಡರ್ ಸೆಕ್ರೆಟರಿ ಡೆಪ್ಯುಟಿ ಸೆಕ್ರೆಟರಿ ಹತ್ತಿರ ಹೋದ. ಡೆಪ್ಯೂಟಿ ಸೆಕ್ರೆಟರಿ ಜಾಯಿಂಟ್ ಸೆಕ್ರೆಟರಿ ಹತ್ತಿರ ಹೋದ. ಜಾಯಿಂಟ್ ಸೆಕ್ರೆಟರಿ ಚೀಫ್ ಸೆಕ್ರೆಟರಿ ಬಳಿಗೆ ತಲುಪಿದ. ಆಗ ಚೀಫ್ ಸೆಕ್ರೆಟರಿ ಜಾಯಿಂಟ್ ಸೆಕ್ರೆಟರಿಗೆ ಏನೋ ಹೇಳಿದ. ಜಾಯಿಂಟ್ ಸೆಕ್ರೆಟರಿ ಡೆಪ್ಯೂಟಿ ಸೆಕ್ರಟರಿಗೆ ಅದನ್ನು ಹೇಳಿದ. ಡೆಪ್ಯೂಟಿ ಸೆಕ್ರೆಟರಿ ಅಂಡರ್ ಸೆಕ್ರೆಟರಿಗೆ ವರ್ಗಾಹಿಸಿದ. ಫೈಲ್ ಓಡಾಡತೊಡಗಿತು. ಈ ಓಡಾಟದಲ್ಲಿ ಅರ್ಧ ದಿನ ಕಳೆದೇ ಹೋಯಿತು.

ಮಧ್ಯಾಹ್ನ ಊಟದ ಬಳಿಕ ಆ ಮರದ ಕೆಳಗೆ ಹುದುಗಿಹೋಗಿರುವ ವ್ಯಕ್ತಿಯ ಸುತ್ತ ಜನರ ಗುಂಪು ಸೇರಿತು. ಸೇರಿದ್ದ ಜನರು ತರಹೇವಾರಿ ಮಾತಾಡತೊಡಗಿದರು. ಕೆಲವು ಕ್ಲಾರ್ಕ್‌ಗಳು ಮೇಲಿನ ಅಪ್ಪಣೆಗೆ ಕಾಯುತ್ತ ಕುಳಿತುಕೊಳ್ಳುವ ಬದಲಾಗಿ ತಾವೇ ಸ್ವತಃ ಮರವನ್ನು ಸರಿಸುವ ಕೆಲಸಕ್ಕೆ ಮುಂದಾಗುತ್ತಿರುವಾಗಲೇ ಸೂಪರಿಟೆಂಡೆಂಟ್ ಫೈಲನ್ನು ಹಿಡಿದುಕೊಂಡು ಅಲ್ಲಿಗೆ ಓಡೋಡಿ ಬಂದು ಅವಸರದಲ್ಲಿಯೇ... 'ನೋಡಿ, ಈ ಮರವನ್ನು ನಾವು ತೆಗೆಯುವ ಹಾಗೆ ಇಲ್ಲ. ನಾವು ವಾಣಿಜ್ಯ ವಿಭಾಗದವರು. ಈ ಮರ ಕೃಷಿ ವಿಭಾಗದ ಅಧೀನಕ್ಕೆ ಬರುತ್ತದೆ. ಹಾಗಾಗಿ ನಾನು ಈ ಫೈಲನ್ನು ತುರ್ತು ಕ್ರಮಕ್ಕಾಗಿ ಎಂದು ಬರೆದು ಈಗಲೇ ಕೃಷಿ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಅಲ್ಲಿಂದ ಉತ್ತರ ಬಂದ ಕೂಡಲೇ ಇದನ್ನು ತೆಗೆಸಲಾಗುವುದು...' ಎಂದು ಹೇಳಿದ. ಮರುದಿನ ಮರವನ್ನು ತೆಗಿಸುವ ಜವಾಬ್ದಾರಿ ವಾಣಿಜ್ಯ ವಿಭಾಗಕ್ಕೇ ಸೇರಿದ್ದು ಎಂದು ಕೃಷಿ ವಿಭಾಗದಿಂದ ಉತ್ತರಬಂತು.

ಈ ಉತ್ತರವನ್ನು ಓದಿ ವಾಣಿಜ್ಯ ವಿಭಾಗಕ್ಕೆ ವಿಪರೀತ ಕೋಪ ಬಂತು. ಕೂಡಲೇ ವಾಣಿಜ್ಯ ವಿಭಾಗದಿಂದ ಉತ್ತರ ಹೋಯಿತು. 'ಸದರಿ ಮರವನ್ನು ತೆಗೆಸುವ ಅಥವಾ ತೆಗೆಸದಿರುವ ಜವಾಬ್ದಾರಿ ಕೃಷಿ ವಿಭಾಗದ್ದೇ ಆಗಿದೆಯೇ ಶಿವಾಯ್ ವಾಣಿಜ್ಯ ವಿಭಾಗಕ್ಕೂ ಇದಕ್ಕೂ ಸಂಬಂಧವೇ ಇಲ್ಲ.'

ಎರಡನೇ ದಿನವೂ ಫೈಲ್ ಓಡಾಡುತ್ತಲೇ ಇತ್ತು. ಸಂಜೆಯ ಹೊತ್ತಿಗೆ ಪ್ರತ್ಯುತ್ತರ ಬಂತು... 'ನಾವು ಈ ವಿಷಯವನ್ನು ಹಾರ್ಟಿಕಲ್ಚರ್ ವಿಭಾಗಕ್ಕೆ ವರ್ಗಾಯಿಸುತ್ತಿದ್ದೇವೆ. ಏಕೆಂದರೆ ಇದೊಂದು ಫಲ ನೀಡುವ ಮರದ ವಿಷಯ. ಬೇಸಾಯ, ಆಹಾರ ಬೆಳೆಗಳ ಉತ್ಪತ್ತಿ, ರಕ್ಷಣೆ ಇತ್ಯಾದಿ ವಿಚಾರಗಳು ಮಾತ್ರ ಕೃಷಿ ವಿಭಾಗಕ್ಕೆ ಬರುತ್ತವೆಯೇ ಹೊರತು ಫಲನೀಡುವ ಮರಗಳಲ್ಲ. ಹಾಗಾಗಿ ಸದರಿ ಮರ ಹಾರ್ಟಿಕಲ್ಚರ್ ವಿಭಾಗದ ಅಧಿಕಾರದ ವ್ಯಾಪ್ತಿಗೆ ಬರುತ್ತದೆ.'

ಅಂದು ರಾತ್ರಿಯ ಹೊತ್ತು ಮಾಲಿ ಮರದ ಕೆಳಗೆ ಸಿಲುಕಿಕೊಂಡಿದ್ದ ವ್ಯಕ್ತಿಗೆ ಬಹಳ ಎಚ್ಚರಿಕೆ ಹಾಗೂ ಪ್ರಯಾಸದಿಂದ ಸ್ವಲ್ಪ ಅನ್ನ ಸಾರು ತಿನ್ನಿಸಿದ. ಯಾರಾದರೂ ಇಂತಹ ಸಮಯದಲ್ಲಿ ಕಾನೂನನ್ನು ಕೈಗೆತ್ತಿಕೊಳ್ಳುವ ಹಾಗೂ ಮರವನ್ನು ಅಪ್ಪಣೆ ಇಲ್ಲದೆ ತೆರವುಗೊಳಿಸುವ ಹುನ್ನಾರ ನಡೆಸಬಾರದೆಂದು ಸುತ್ತಲೂ ಪೊಲೀಸ್ ಪಹರೆಯನ್ನು ಹಾಕಲಾಗಿತ್ತು. ಇಷ್ಟಿದ್ದರೂ ಒಬ್ಬ ಪೊಲೀಸ್ ಪೇದೆಗೆ ಕರುಣೆ ಉಕ್ಕಿಬಂದು ಮರದ ಕೆಳಗೆ ಸಿಲುಕಿರುವ ವ್ಯಕ್ತಿಗೆ ಅನ್ನ ನೀಡುವುದಕ್ಕೆ ಸದ್ದಿಲ್ಲದೆ ಮಾಲಿಗೆ ಅವಕಾಶ ಮಾಡಿಕೊಟ್ಟಿದ್ದ. ಆಗ ಮಾಲಿ ಆ ವ್ಯಕ್ತಿಗೆ ಅನ್ನ ತಿನ್ನಿಸಿ, 'ನಿನ್ನ ಫೈಲ್ ಆಚೀಚೆ ಓಡಾಡುತ್ತಿದೆ. ನಾಳೆಯೇ ಈ ಕುರಿತಂತೆ ಅಂತಿಮ ತೀರ್ಮಾನ ಆಗಲಿದೆ' ಎಂದು ಹೇಳಿದ.

ಮರದ ಕೆಳಗೆ ಸಿಲುಕಿಕೊಂಡಿದ್ದ ವ್ಯಕ್ತಿ ಏನನ್ನು ಹೇಳಲಾರದ ಸ್ಥಿತಿಯಲ್ಲಿದ್ದ.

ಈಗ ಮಾಲಿ ಆ ಮರದ ಬೊಡ್ಡೆಯನ್ನು ಆಚೆ–ಈಚೆ ಚೆನ್ನಾಗಿ ನೋಡಿ ಹೇಳಿದ. 'ಸದ್ಯ..! ಮರದ ಕಾಂಡ ನಿನ್ನ ಅಂಡಿನ ಮೇಲೆಯೇ ಬಿದ್ದಿದೆ. ಸ್ವಲ್ಪ ಮೇಲೆ ಸೊಂಟದ ಭಾಗಕ್ಕೆ ಬಿದ್ದಿದ್ದರೆ ಬೆನ್ನುಮೂಳೆಯೇ ಮುರಿದುಹೋಗಿ ಬಿಡುತ್ತಿತ್ತು. ಆಂ, ಇಲ್ಲಿ ನಿನ್ನ ಪರಿಚಯದಾರರು ವಾರಸುದಾರರು ಯಾರಾದರೂ ಇದ್ದರೆ ಹೇಳು ಕೂಡಲೇ ನಾನು ಅವರಿಗೆ ಸುದ್ದಿ ಮುಟ್ಟಿಸುವ ಪ್ರಯತ್ನ ಮಾಡುತ್ತೇನೆ.'

'ನಾನು ಅನಾಥ... ನನಗೆ ಯಾರೂ ಇಲ್ಲ...' ಆತ ಬಹಳ ಕಷ್ಟದಲ್ಲಿ ಉಸುರಿದ.

ಮಾಲಿ ಈತನ ದುಸ್ಥಿತಿಗೆ ಮರುಗುತ್ತ ಅಲ್ಲಿಂದ ನಡೆದ.

ಮೂರನೆಯ ದಿನ ಹಾರ್ಟಿಕಲ್ಚರ್ ವಿಭಾಗದಿಂದ ಉತ್ತರ ಬಂತು. ಆ ಉತ್ತರ ತುಸು ಕಡಕ್ಕಾಗಿ ಮತ್ತು ವಿಮರ್ಶಾತ್ಮಕವಾಗಿ ಇದ್ದ ಕಾರಣ ಹಾರ್ಟಿಕಲ್ಚರ್ ವಿಭಾಗದ ಸೆಕ್ರೆಟರಿ ಸಾಹಿತ್ಯಾಸಕ್ತ ಎಂಬುದು ಒಕ್ಕಣೆಯಿಂದ ತಿಳಿಯುತ್ತಿತ್ತು. 'ವಿಸ್ಮಯದ ವಿಷಯವೇನೆಂದರೆ ಈಗಂತೂ ಮರ ಬೆಳೆಸಿ ಎಂಬ ಕರೆ ದೇಶದೆಲ್ಲೆಡೆ ಅನುರಣಿಸುತ್ತಿದೆ. ಮರ ನೆಡುವ ಸ್ಕೀಮ್ ಹರಡಿದೆ ದೇಶಾದ್ಯಂತ. ಆದರೆ ದೇಶದ ಕೆಲ ಅಧಿಕಾರಿಗಳು ಮರ ಕಡಿಯಿರೆಂದರೆ ಮತ್ತೆ ಹಲವರು ಬೆಳೆಸಿರೆನ್ನುವರು. ಫಲನೀಡುವ ಮರಗಳನು ಅದರಲ್ಲೂ ನೇರಳೆಮರಗಳನು. ಹಾಗಾಗಿ ಜನರು ಬಾಯಿ ಚಪ್ಪರಿಸಿ ತಿನ್ನುವ ಈ ನೇರಳೆಹಣ್ಣಿನ ಮರವನ್ನು ಕಡಿಯಲು ಕೊಡಲಾರೆ ನಾನೆಂದೂ ಅಪ್ಪಣೆಯನು...'

ಈಗೇನು ಮಾಡುವುದು..? ಹಾಂ., ಒಬ್ಬ ಭಂಡಧೈರ್ಯದ ವ್ಯಕ್ತಿ ಹೇಳಿದ... 'ಒಂದು ವೇಳೆ ಮರವನ್ನು ಕಡಿಯಲಾಗದಿದ್ದರೆ ಈ ಮನುಷ್ಯನನ್ನೇ ಕತ್ತರಿಸಿ ತೆಗೆದುಬಿಡೋಣ. ಮರದ ಅಡಿಗೆ ಸಿಲುಕಿರುವ ಭಾಗವನ್ನು ನಾಜೂಕಾಗಿ ಕತ್ತರಿಸಿದರೆ ಆ ಕಡೆ ಮತ್ತು ಈ ಕಡೆಯಿಂದ ಶರೀರದ ಎರಡೂ ಭಾಗಗಳನ್ನು ಸಲೀಸಾಗಿ ತೆಗೆದುಬಿಡಬಹುದು. ಇದರಿಂದ ಮರವನ್ನು ಕತ್ತರಿಸುವ ಪ್ರಮೇಯವೇ ಬರುವುದಿಲ್ಲ...'

'ಅಯ್ಯಯ್ಯೋ..! ಹಾಗೆ ಮಾಡುವುದಕ್ಕೆ ಬದಲು ನಾನು ಹೀಗೆ ಇಲ್ಲಿಯೇ ಸತ್ತು ಬಿಡುತ್ತೇನೆ.' ಆ ವ್ಯಕ್ತಿ ಕೆಳಗಿನಿಂದಲೇ ನರಳುತ್ತ ಹೇಳಿದ.

ಆ ವ್ಯಕ್ತಿಯನ್ನು ಕತ್ತರಿಸುವ ಯೋಜನೆ ಮುಂದಿಟ್ಟಿದ್ದಾತ ತನ್ನ ಮಾತನ್ನು ಮುಂದುವರೆಸಿದ. 'ನೋಡಿ, ಪ್ಲಾಸ್ಟಿಕ್ ಸರ್ಜರಿಯಿಂದ ವ್ಯಕ್ತಿಯ ಅಂಗಾಂಗಗಳನ್ನು ಪುನಃ ಯಥಾವತ್ತಾಗಿ ಜೋಡಿಸಲಾಗುತ್ತದೆ. ಜೀವಕ್ಕೆ ಏನೂ ಹಾನಿ ಆಗುವುದಿಲ್ಲ.'

ಸರಿ. ಈಗ ಫೈಲನ್ನು ಮೆಡಿಕಲ್ ಡಿಪಾರ್ಟ್‌ಮೆಂಟ್‌ಗೆ ರವಾನಿಸಲಾಯಿತು. ಅಲ್ಲಿಂದ ತುರ್ತಾಗಿ ಕಾರ್ಯಾದೇಶ ಹೊತ್ತ ಸರ್ಜನ್ ಒಬ್ಬರು ಸ್ಥಳಕ್ಕೆ ಬಂದು ಮರದ ಕೆಳಗೆ ಹುದುಗಿರುವ ವ್ಯಕ್ತಿಯ ರಕ್ತದೊತ್ತಡ, ಉಸಿರಾಟದ ಪ್ರಕ್ರಿಯೆ, ಹೃದಯ, ಶ್ವಾಸಕೋಶ... ಹೀಗೆ ಎಲ್ಲವನ್ನು ಬಹು ಪ್ರಯಾಸದಿಂದಲೇ ಪರೀಕ್ಷಿಸಿ ರಿಪೋರ್ಟ್ ನೀಡಿದರು. 'ಈ ವ್ಯಕ್ತಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಬಹುದು ಹಾಗೂ ಸರ್ಜರಿ ಸಕ್ಸಸ್ ಕೂಡ ಆಗಬಹುದು. ಆದರೆ ಜೀವ ಉಳಿಯುವ ಗ್ಯಾರಂಟಿ ಇಲ್ಲ...'

ಹಾಗಾಗಿ ಪ್ಲಾಸ್ಟಿಕ್ ಸರ್ಜರಿ ವಿಚಾರವನ್ನು ಕೈಬಿಡಲಾಯಿತು.

ಆ ರಾತ್ರಿ ಮಾಲಿ ಪುನಃ ಮೆಲ್ಲಮೆಲ್ಲನೆ ಬಂದು ಈ ವ್ಯಕ್ತಿಗೆ ಸ್ವಲ್ಪ ಅನ್ನ ತಿನ್ನಿಸಿ ಸಾಂತ್ವನದ ಮಾತು ಹೇಳಿದ. 'ಈಗ ನಿನ್ನ ವಿಷಯ ಮೇಲಕ್ಕೆ ತಲುಪಿದೆ. ಸೆಕ್ರೆಟರಿಯೇಟ್‌ನಲ್ಲಿ ಎಲ್ಲಾ ಸೆಕ್ರೆಟರಿಗಳ ಜೊತೆ ತುರ್ತು ಮೀಟಿಂಗ್ ನಡೆಯಲಿದೆ. ನಿನ್ನ ಬಗ್ಗೆ ಶೀಘ್ರವೇ ನಿರ್ಣಯ ಬರುತ್ತದೆ ಎಲ್ಲಾ ಒಳ್ಳೆಯದಾಗುತ್ತದೆ.'

'ಅಯ್ಯೋ.., ನನ್ನನ್ನು ನೀನು ತಿರಸ್ಕರಿಸಲಾರೆಯೆಂದು ಗೊತ್ತು ನನಗೆ. ಆದರೆ ನನ್ನ ಉಸಿರೇ ನಿಂತು ಹೋಗುವುದು ನೀ ತರುವ ಶುಭ ಸುದ್ದಿಯ ವೇಳೆಗೆ...' ಆ ವ್ಯಕ್ತಿ ಮೆಲ್ಲನೆ ಉಸುರಿದ.

ಮಾಲಿ ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟು ಕೇಳಿದ. 'ಅರೇ..! ನೀನು ಕವಿಯೇನು...?'

ಹುದುಗಿರುವ ಮನುಷ್ಯ ಕಷ್ಟದಿಂದ ತಲೆ ಅಲ್ಲಾಡಿಸಿದ.

ಮಾರನೆಯದಿನ ಮಾಲಿ ಜವಾನನಿಗೆ ಹೇಳಿದ. ಜವಾನ ಕ್ಲಾರ್ಕ್‌ಗೆ, ಕ್ಲಾರ್ಕ್ ಹೆಡ್‌ಕ್ಲಾರ್ಕ್‌ಗೆ... ಅಲ್ಲಿಂದ ಕೆಲವೇ ಕ್ಷಣಗಳಲ್ಲಿ ಸೆಕ್ರೆಟರಿಯೇಟ್ ತನಕ ಸುದ್ದಿ ಹೋಯಿತು. ಹುದುಗಿರುವ ವ್ಯಕ್ತಿ ಕವಿಯಂತೆ...! ಮತ್ತಿನ್ನೇನು...! ಸುದ್ದಿ ಎಲ್ಲಾ ಕಡೆ ಹರಡಿತು. ಕವಿಯನ್ನು ನೋಡಲು ಜನರ ಗುಂಪು ಸೇರಿತು. ಸಂಜೆಯ ವೇಳೆಗೆ ಬೇರೆ ಬೇರೆ ಕವಿಗಳೂ ಸೇರಿದಂತೆ ಜನವೋ ಜನ. ಸೆಕ್ರೆಟರಿಯೇಟ್‌ನ ಕ್ಲಾರ್ಕ್, ಸೆಕ್ರೆಟರಿಗಳೂ ಬಂದರು. ಗಜಲ್

